ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	759 (767)
ಮಾನ್ಯ ಸದಸ್ಯರ ಹೆಸರು	ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	20/12/2021.
ಉತ್ತರಿಸಬೇಕಾದ ಸಚಿವರು	ಮಾನ್ಯ ಆರೋಗ್ಯ & ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯು ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ ಮಾಡಿದೆಯೇ;	ಹೌದು
(ಆ)	ಮಾಡಿದ್ದಲ್ಲಿ, ಸದರಿ ಸಂಸ್ಥೆಗೆ ಬೇಕಾದ ಎಲ್ಲಾ ಮೂಲಭೂತ ಸೌಕರ್ಯಗಳು, ವೈದ್ಯಕೀಯ ಉಪಕರಣಗಳು ಹಾಗೂ ಬೋಧಕ ಸಿಬ್ಬಂದಿಗಳನ್ನು ಒದಗಿಸಲಾಗಿದೆಯೇ; (ವಿವರ ನೀಡುವುದು)	ಕೊಡಗು ಜಿಲ್ಲಾ ಆಸ್ಪತ್ರೆಯನ್ನು ಬೋಧಕ ಆಸ್ಪತ್ರೆಯನ್ನಾಗಿ ಪರಿವರ್ತಿಸಿ, ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಡಿಕೇರಿಯನ್ನು ಪ್ರಾರಂಭಿಸಲಾಗಿದ್ದು, ಪ್ರಸ್ತುತ 300 ಹಾಸಿಗೆಗಳ ಸಾಮರ್ಥ್ಯವನ್ನು ಹೊಂದಿದ್ದು, ಮುಂದುವರೆದಂತೆ 450 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆ ಕಟ್ಟಡ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಎಂ.ಬಿ.ಬಿ.ಎಸ್ ಶಿಕ್ಷಣ ನೀಡಲು ನಿಗಧಿಪಡಿಸಿರುವ ಎಂ.ಸಿ.ಐ ನಿಯಮಾವಳಿಯಂತೆ ವೈದ್ಯಕೀಯ ಉಪಕರಣಗಳನ್ನು ಒದಗಿಸಲಾಗಿದೆ. ಬೋಧಕ ಸಿಬ್ಬಂದಿಗಳ ಮಂಜೂರಾತಿ ಕಾರ್ಯ ನಿರತ, ಖಾಲಿ ಹುದ್ದೆಗಳ ವಿವರ ಈ ಕೆಳಕಂಡಂತಿದೆ;

ಗ್ರೂಪ್	ಮಂಜೂರಾದ ಹುದ್ದೆ	ಭರ್ತಿಯಾದ ಹುದ್ದೆ	ಖಾಲಿ ಇರುವ ಹುದ್ದೆ
ಎ	228	189	39
ಬಿ	0	0	0
ಸಿ	204	200	04
ಡಿ	74	47	00

ಕ್ರ.ಸಂ	ಪ್ರಶ್ನೆ	ಉತ್ತರ
(ಇ)	ಸದರಿ ಸಂಸ್ಥೆಯಿಂದ ಜಿಲ್ಲೆಯ ಜನರಿಗೆ ದೊರೆಯುತ್ತಿರುವ ವೈದ್ಯಕೀಯ ನೆರವು ಹಾಗೂ ಸೌಲಭ್ಯಗಳ ವಿವರಗಳೇನು?	ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೋಧಕ ಆಸ್ಪತ್ರೆಯಲ್ಲಿ ಜನರಿಗೆ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. • ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆ. • ಸುರಕ್ಷಿತ ಗರ್ಭಪಾತ (ಸಿ.ಎ.ಸಿ). • ಗೆಳತಿ ಸಖಿ ಒನ್ ಸ್ಟಾಪ್ ಸೆಂಟರ್. • ಜನನ ಮತ್ತು ಮರಣ ಪ್ರಮಾಣ ಪತ್ರ. • ಜನನಿ ಸುರಕ್ಷಾ ಯೋಜನಾ (ಜೆ.ಎಸ್.ವೈ) • ಕಾಂಗರೂ ಮದರ್ ಕೇರ್ (ಕೆ.ಎಂ.ಸಿ) • ವಿಕಲಚೇತನ ಪ್ರಮಾಣಪತ್ರ (ಯು.ಡಿ.ಐ.ಡಿ) • ಪೌಷ್ಠಿಕ ಪುನಶ್ಚೇತನ ಕೇಂದ್ರ (ಎನ್.ಆರ್.ಸಿ) • ಕಾರ್ಮಿಕರ ರಾಜ್ಯ ವಿಮಾ ನಿಗಮ (ಇ.ಎಸ್.ಐ.ಸಿ)

		• ರಾಷ್ಟ್ರೀಯ ಅಂಧತ್ವ ನಿರ್ಮೂಲನ ಕಾರ್ಯಕ್ರಮ. • ಜನನಿ ಶಿಶು ಸುರಕ್ಷಾ ಕಾರ್ಯಕ್ರಮ. • ಸುರಕ್ಷಾ ಮಾತೃತ್ವ ಅಭಿಯಾನ. • ಕುಟುಂಬ ಕಲ್ಯಾಣ ಕಾರ್ಯಕ್ರಮ. • ಪ್ರಧಾನ ಮಂತ್ರಿ ಮಾತೃತ್ವ ಅಭಿಯಾನ. • ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ • ರಾಷ್ಟ್ರೀಯ ಕಿಶೋರ್ ಸ್ವಾಸ್ಥ್ಯ ಕಾರ್ಯಕ್ರಮ. • ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮ. • ರಾಷ್ಟ್ರೀಯ ಕ್ಷಯ ರೋಗ ನಿಯಂತ್ರಣಕಾರ್ಯಕ್ರಮ. • ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ಬಾಹ್ಯ ಸೇವಾ ಕೇಂದ್ರ. • ಇ-ಆಸ್ಪತ್ರೆ • ಮೇರಾ ಆಸ್ಪತಾಲ್ • ಇ ಸಂಜೀವಿನಿ. • ಟೆಲಿ ಮೆಡಿಸನ್ • ಎ.ಆರ್.ಟಿ ಸೇವೆಗಳು • ದಂತ ಭಾಗ್ಯ ಯೋಜನೆ • ಮಮತೆಯ ತೊಟ್ಟಿಲು • ಲಕ್ಷ್ಯ ರಾಷ್ಟ್ರೀಯ ಕಾರ್ಯಕ್ರಮ. ಇನ್ನಿತರೆ ಸೇವೆಗಳಾದ ಡಯಾಲಿಸಿಸ್, ಫಿಜಿಯೋಥೆರಪಿ, ಶೈತ್ಯಗಾರ ಸೇವೆ, ಅಲ್ಟ್ರ ಸೌಂಡ್ ಸ್ಕ್ಯಾನಿಂಗ್, ಐಸಿಟಿಸಿ ಸೇವೆ, ಶಸ್ತ್ರ ಚಿಕಿತ್ಸಾ ಸೇವೆ, ವೈದ್ಯಕೀಯ ಸೇವೆಗಳು, ಹೊರ ರೋಗಿಗಳ ವಿಭಾಗ, ಒಳ ರೋಗಿಗಳ ವಿಭಾಗ, 24x7 ಸಿಟಿ ಸ್ಕ್ಯಾನಿಂಗ್, 24x7 ರಕ್ತ ನಿಧಿ ಕೇಂದ್ರ, 24x7 ಪ್ರಸೂತಿ ಸೇವೆ, 24x7 ಆಂಬುಲೆನ್ಸ್ ಸೇವೆ, 24x7 ಪ್ರಯೋಗಾಲಯ ಸೇವೆ, 24x7 ತೀವ್ರಾ ನಿಗಾ ಘಟಕ, 24x7 ಅಪಘಾತ ಮತ್ತು ತುರ್ತು ಚಿಕಿತ್ಸಾ ವಿಭಾಗ, ಮಕ್ಕಳ ತೀವ್ರ ನಿಘಾ ಘಟಕ, ನವಜಾತ ಶಿಶು ತೀವ್ರ ನಿಗಾ ಘಟಕ ಸೇರಿದಂತೆ ಇನ್ನಿತರ ಪೂರಕ ಸೇವೆಗಳನ್ನು ಒದಗಿಸಲಾಗುತ್ತಿದೆ.

ಕಡತ ಸಂ: ಎಂಇಡಿ 455 ಎಂ ಎಸ್ ಎಫ್ 2021

(ಡಾ|| ಕೆ. ಸುಧಾಕರ್)

ವೈದ್ಯಕೀಯ ಶಿಕ್ಷಣ ಹಾಗೂ ಆರೋಗ್ಯ & ಕುಟುಂಬ ಕಲ್ಯಾಣ

ಸಚಿವರು.